-5- Received 29/7/15

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ತಾಲ್ಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಕಾರ್ಯನಿರ್ವಹಿಸುವ ಆಡಳಿತ ಸಹಾಯಕರು ಹಾಗೂ ಗುಮಾಸ್ತ-ವಾ-ಬೆರಳಚ್ಚುಗಾರರಿಗೆ ಮೊಬೈಲ್ ಫೋನ್ ಭತ್ಯೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ: 1. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರ ಪತ್ರ ಸಂಖ್ಯೆ: ಕರಾಕಾಸೇಪ್ರಾ/150/ಎಡಿಎಂ/2014 ದಿನಾಂಕ 12-09-2014.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು
ಕ್ರಮ ಸಂಖ್ಯೆ 7356
28 JUL 2015

******

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ 12-09-2014ರ ಪತ್ರದಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರು ಮಾನ್ಯ ಮುಖ್ಯ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ 32 ನೇ ಸರ್ವ ಸದಸ್ಯರ ಸಭೆಯ ನಿರ್ಣಯಗಳನ್ನು ಉಲ್ಲೇಖಿಸುತ್ತಾ, ರಾಜ್ಯದ ಎಲ್ಲಾ ಜಿಲ್ಲೆಗಳ ಕಾನೂನು ಸೇವಾ ಪ್ರಾಧಿಕಾರದಲ್ಲಿ ಒಂದು ಆಡಳಿತ ಸಹಾಯಕರು ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರತಿ ತಾಲ್ಲೂಕು ಕಾನೂನು ಸೇವಾ ಸಮಿತಿಯಲ್ಲಿ ಒಂದು ಗುಮಾಸ್ತ-ವಾ-ಬೆರಳಚ್ಚುಗಾರರು ಕೆಲಸ ನಿರ್ವಹಿಸುತ್ತಿದ್ದು ಸದರಿ ನೌಕರರು ಕಛೇರಿ ಕೆಲಸ ನಿಮಿತ್ತ ತಮ್ಮ ಸ್ವಂತ ಮೊಬೈಲ್ ಫೋನ್‌ಗಳನ್ನು ಉಪಯೋಗಿಸಿ ಅವಶ್ಯ ಮಾಹಿತಿಯನ್ನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ತಿಳಿಸುವರೆಂದೂ ತುರ್ತು ಸಂದರ್ಭದಲ್ಲಿ ಸದರಿ ನೌಕರರನ್ನು ಪ್ರಾಧಿಕಾರದ ಕಛೇರಿಯಿಂದ ಸಂಪರ್ಕಿಸಿ ಅವಶ್ಯ ಮಾಹಿತಿಯನ್ನು ಅವರ ಮೊಬೈಲ್ ಮುಖಾಂತರ ಪಡೆಯಲಾಗುತ್ತಿದ್ದು, ಈ ನೌಕರರಿಗೆ ಅಲ್ಪ ಸಂಭಾವನೆ ನೀಡಲಾಗುತ್ತಿದೆಯೆಂದು, ಆದ ಕಾರಣ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುವ ಆಡಳಿತ ಸಹಾಯಕರಿಗೆ ಮಾಹೆಯಾನ ರೂ. 300/- ಗಳ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಕಾರ್ಯನಿರ್ವಹಿಸುವ ಗುಮಾಸ್ತ-ವಾ-ಬೆರಳಚ್ಚುಗಾರರಿಗೆ ಮಾಹೆಯಾನ ರೂ 250/-ಗಳ ಮೊಬೈಲ್ ಭತ್ಯೆಯನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ. ಮೊಬೈಲ್ ಫೋನ್ ಭತ್ಯೆಯ ವೆಚ್ಚವನ್ನು ಸರ್ಕಾರದಿಂದ ಪ್ರಾಧಿಕಾರಕ್ಕೆ ನೀಡುವ ಅನುದಾನದಿಂದ ಭರಿಸಲಾಗುವುದೆಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ತಿಳಿಸಲಾಗಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಲಾ 158 ಎಲ್‌ಎಡಿ 2015

## ಬೆಂಗಳೂರು, ದಿನಾಂಕ: 22 .07. 2015

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಹಾಯಕರಿಗೆ ಮಾಹೆಯಾನ ರೂ 300/- ರಂತೆ ಹಾಗೂ ಗುಮಾಸ್ತ-ವಾ-ಬೆರಳಚ್ಚುಗಾರರಿಗೆ ರೂ 250/-ರಂತೆ ಮೊಬೈಲ್ ಫೋನ್ ಭತ್ಯೆಯನ್ನು ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಇದರಿಂದ ಉಂಟಾಗುವ ವೆಚ್ಚವನ್ನು ಪ್ರಾಧಿಕಾರಕ್ಕೆ ಈ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದಲೇ ಭರಿಸುವಂತೆ ತಿಳಿಸಲಾಗಿದೆ.

..2/-

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 217 ವೆಚ್ಚ-10/2015 ದಿನಾಂಕ 08/07/2015 ರಲ್ಲಿ ನೀಡಿರುವ ಸಹಮತಿ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
Sayeeda Banu 22/7/15
(ಸಯೀದಾ ಬಾನು)
ಸರ್ಕಾರದ ಅಧೀನ ಕಾರ್ಯದರ್ಶಿಗಳು
ಕಾನೂನು ಇಲಾಖೆ (ಆಡಳಿತ-2)

ಇವರಿಗೆ:

1. ಮಹಾಲೇಖಪಾಲರು(ಎ ಮತ್ತು ಇ, ಲೆಕ್ಕ ಪರಿಶೋಧನೆ-1 ಮತ್ತು 2), ಪಾರ್ಕ್ ಹೌಸ್ ರೋಡ್, ಬೆಂಗಳೂರು - 01
2. ಉಪನಿರ್ದೇಶಕರು, ಖಜಾನೆ ಇಲಾಖೆ, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, 2ನೇ ಮಹಡಿ ದಕ್ಷಿಣ ಬ್ಲಾಕ್, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ,ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
4. ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯ ದೇಗುಲ, ಮೊದಲನೆಯ ಮಹಡಿ, ಹೆಚ್.ಸಿದ್ದಯ್ಯ ರಸ್ತೆ, ಬೆಂಗಳೂರು-560 027.
5. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-2 & 10, ವಿಧಾನಸೌಧ, ಬೆಂಗಳೂರು.
6. ಆಂತರಿಕ ಆರ್ಥಿಕ ಸಲಹೆಗಾರರು, ವಸತಿ ಕಾನೂನು ಮತ್ತು ನಗರಾಭಿವೃದ್ಧಿ ಇಲಾಖೆ
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾನೂನು ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಜಂಟಿ ಕಾರ್ಯದರ್ಶಿ, ಕಾನೂನು ಇಲಾಖೆ, ಇವರ ಆಪ್ತ ಸಹಾಯಕರು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಧೀನಕಾರ್ಯದರ್ಶಿ (ಆಡಳಿತ-1), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ವಿಧಾನಸೌಧ, ಬೆಂಗಳೂರು
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು